## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್–ಸಂಖ್ಯೆ 129,ರಲ್ಲಿ ದಿನಾಂಕ: 07–05–2022ರಂದು ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು.

ದಿನಾಂಕ:07–05–2022ರಂದು ವಾರ್ಡ್ ಸಂಖ್ಯೆ 129ರ ಮೇ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ವಾರ್ಡ್‌ಸಂಖ್ಯೆ:129ರ ನವೀಕರಣಗೊಳ್ಳುತ್ತಿರುವ ವಾರ್ಡ್ ಕಛೇರಿಯಲ್ಲಿ ಹಾಜರಿದ್ದ ಎಲ್ಲಾ ಸ್ಥಳೀಯ ನಿವಾಸಿಗಳ ರವರೊಂದಿಗೆ ನಡೆಸಲಾಯಿತು. ಹಾಗೂ ಈ ಕೆಳಕಂಡಂತೆ ಸದಸ್ಯರು/ಸಾರ್ವಜನಿಕರು ಭಾಗವಹಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:

1. ಶ್ರೀ.ಜಿ.ವಿಶ್ವನಾಥ್, ಅಧೀಕ್ಷಕಅಭಿಯಂತರರು (ದಾಸರಹಳ್ಳಿ ವಲಯ) ಹಾಗೂ ವಾರ್ಡ್ 129 ನೋಡಲ್ ಅಧಿಕಾರಿಗಳು
2. ಮಾರ್ಷಲ್ ವಾರ್ಡ್–129
3. ಕಿರಿಯ ಅಭಿಯಂತರರು ಶ್ರೀ.ವೆಂಕಟೇಶ.ಸಿ
4. ಸಹಾಯಕ ಅಭಿಯಂತರರು ಶ್ರೀ.ಸಿದ್ಧರಾಮಯ್ಯ
5. ಶ್ರೀ.ರವಿಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್–129
6. ಶ್ರೀ.ವೆಂಕಟೇಶ್ ಮತ್ತು ಶ್ರೀ ರಾಮಣ್ಣ ಎನ್.ಜಿ.ಇ.ಎಫ್ ಬಡಾವಣೆ
7. ಶ್ರೀ. ರಾಮಚಂದ್ರ ಮತ್ತು ಎಸ್.ಕೆ.ಭಟ್ 14ನೇ ಬ್ಲಾಕ್ ಎನ್.ಜಿ.ಇ.ಎಫ್ ಬಡಾವಣೆ ನಾಗರಭಾವಿ ನಿವಾಸಿ
8. ಶ್ರೀ.ದತ್ತಾ, ನೃಪತುಂಗ ನಗರ್ ಸ್ಥಳಿಯ ನಿವಾಸಿ,
9. ಶ್ರೀ ವಿ.ಹನುಮಂತಯ್ಯ **GOVT Press layout** ಬಡಾವಣೆ ರವರು ಹಾಜರಿದ್ದರು.
10. ಶ್ರೀ ಹನುಮಂತಪ್ಪ **BWSSB AEE**
11. ಶ್ರೀ ಭರತ್ ಸಹಾಯಕ ಅಭಿಯಂತರರು ವಿದ್ಯುತ್ ಬಿಬಿಎಂಪಿ
12. ಶ್ರೀ.ರಾಮಣ್ಣ ತಿಮ್ಮಯ್ಯ ಕಮಿಟಿ ಸದಸ್ಯರು
13. ಶ್ರೀ.ಚಂದ್ರಕಾಂತ್ ಕಿರಿಯ ಅಭಿಯಂತರರು (ಬೆಸ್ಕಾಂ)

ಸದರಿ ವಾರ್ಡ್ ಸಮಿತಿ ಸಭೆಯನ್ನು ಹಾಜರಾಗಿದ್ದ ಎಲ್ಲಾ ಸದಸ್ಯರು ಹಾಗೂ ಅಧಿಕಾರಿಗಳನ್ನು ಸ್ವಾಗತಕೋರುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದಂತೆ ಹಾಜರಿದ್ದ ನಿವಾಸಿಗಳು ಈ ಕೆಳಕಂಡಂತೆ ದೂರುಗಳನ್ನು ವ್ಯಕ್ತಪಡಿಸಿ ತುರ್ತಾಗಿ ಸರಿಪಡಿಸಲು ಸಭೆಯಲ್ಲಿ ಕೋರಿರುತ್ತಾರೆ.

- 14ನೇ ಬ್ಲಾಕಿನಲ್ಲಿ 6ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ ಸಂಧಿಸುವ ಜಾಗದಲ್ಲಿ ಮತ್ತು ಫೋರ್ಟಿಸ್ ಆಸ್ಪತ್ರೆ ಮುಂಭಾಗದಲ್ಲಿನ ಹಾಳಾಗಿರುವ ಅಡಿಗಾಲುವೆಯ ಹಾಗೂ ಚರಂಡುಗಳ ಮೇಲೆ ಲಭ್ಯವಿಲ್ಲದ ಚಪ್ಪಡಿ ಕಲ್ಲುಗಳನ್ನು ಬದಲಾಯಿಸಲು
- ನೃಪತುಂಗ ನಗರದಲ್ಲಿನ ಪೂಜಾ ಅಪಾರ್ಟ್‌ಮೆಂಟ್ ಹತ್ತಿರವಿರುವ ಖಾಲಿ ಜಾಗದಲ್ಲಿ ಶೇಖರಣೆಯಾಗಿರುವ ಹೂಳನ್ನು ತೆಗೆಯುವುದು
- ವಾರ್ಡ್–129 ರಲ್ಲಿ ಮುಖ್ಯ/ಅಡ್ಡರಸ್ತೆಗಳಲ್ಲಿ ಉದ್ಭವವಾಗಿರುವ ರಸ್ತೆಗುಂಡಿಗಳನ್ನು ಮುಚ್ಚಲು ಆದ್ಯತೆ ಮೇಲೆ ಕ್ರಮ ವಹಿಸಲು ಕೋರಿರುತ್ತಾರೆ.
- ಆರೋಗ್ಯ ಬಡಾವಣೆಯಲ್ಲಿ ಈ ಹಿಂದೆ ಶ್ರೀ.ತ್ಯಾಗರಾಜ್ ರವರು 3ನೇ ಮೇನ್, 6ನೇ ಬಿ ಅಡ್ಡರಸ್ತೆಯಲ್ಲಿ ತಿಳಿಸಿದ್ದ ದೂರಿಗೆ ಸಂಬಂಧಿಸಿದಂತೆ ಸದರಿ ತಗ್ಗು ಪ್ರದೇಶದಲ್ಲಿ ಯಾವುದೇ ಕ್ರಮ ವಹಿಸಿಲ್ಲದಿರುವ ಬಗ್ಗೆ ತಿಳಿಸಿದ್ದು ಆದ್ಯತೆ ಮೇರೆಗೆ ಸದರಿ ದೂರನ್ನು ಖುದ್ದು ಪರಿಶೀಲಿಸಿ ಕ್ರಮ ವಹಿಸಬೇಕೆಂದು ಹಾಜರಿದ್ದ ಕಿರಿಯ ಅಭಿಯಂತರರು ಶ್ರೀ.ವೆಂಕಟೇಶ್.ಸಿ ರವರನ್ನು ಹಾಜರಿದ್ದ ನೂಡಲ್ ಅಧಿಕಾರಿಯವರು ತಿಳಿಸಿರುತ್ತಾರೆ.

ಕ್ರಮ: ಸ.ಕಾ.ನಿ.ಅ (ಆರ್.ಆರ್ ನಗರ), ಕಿರಿಯ ಅಭಿಯಂತರರು ಶ್ರೀ.ವೆಂಕಟೇಶ.ಸಿ ಮತ್ತು ಸಹಾಯಕ ಅಭಿಯಂತರರು ವಾರ್ಡ್–129

ಬೆಸ್ಕಾಂ ವಿಭಾಗದ ವತಿಯಿಂದ ಕೇಬಲ್ ಬದಲಾಯಿಸಲು ಕ್ರಮ ವಹಿಸಲಾಗಿರುವ ಅನೇಕ ಸ್ಥಳಗಳಲ್ಲಿ ರೆಸ್ಟೋರೇಷನ್ ಮಾಡಿಸಬೇಕೆಂದು ಹಾಜರಿದ್ದ ನಿವಾಸಿಗಳು ಸಭೆಯಲ್ಲಿ ವ್ಯಕ್ತಪಡಿಸಲಾಗಿ ಹಾಜರಿದ್ದ ಬೆಸ್ಕಾಂ ಕಿರಿಯ ಅಭಿಯಂತರರು ಸಭೆಯಲ್ಲಿ ತಿಳಿಸಿದ್ದ ಸ್ಥಳಗಳನ್ನು ಗುರುತಿಸಿ ಸರಿಪಡಿಸಲು ಕ್ರಮ ವಹಿಸುವುದಾಗಿ ತಿಳಿಸಿದ್ದು ಮತ್ತು ಆರೋಗ್ಯ ಬಡಾವಣೆಯ 3ನೇ ಮುಖ್ಯರಸ್ತೆ ಸರ್ಕಾರಿ ಮುದ್ರಾಣಾಲಯ ಬಡಾವಣೆಯಲ್ಲಿ ಹಾಳಾಗಿರುವ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ಕೋರಿರುತ್ತಾರೆ.ತತ್ಸಂಬಂಧ ಹಾಜರಿದ್ದ ಸಹಾಯಕ ಅಭಿಯಂತರರು ಶ್ರೀ.ವೆಂಕಟೇಶ್ ರವರೊಂದಿಗೆ ಸಮನ್ವಯ ಮಾಡಿಕೊಂಡು ರೆಸ್ಟೋರೇಷನ್ ಮಾಡಲು ಸಭೆಯಲ್ಲಿ ತಿಳಿಸಲಾಯಿತು.

ಕ್ರಮ: ಕಿರಿಯ ಅಭಿಯಂತರರು ಶ್ರೀ.ಚಂದ್ರಕಾಂತ್ ಬೆಸ್ಕಾಂ

**BWSSB** ಗೆ ಸಂಬಂಧಪಟ್ಟಂತೆ ವಾರ್ಡ್ ಸಂಖ್ಯೆ 129ರಲ್ಲಿ ಈ ಹಿಂದಿನ ಸಭೆಯಲ್ಲಿ ವ್ಯಕ್ತಪಡಿಸಲಾದ ದೂರುಗಳನ್ನು ಸರಿಪಡಿಸಲಾಗಿರುವುದಾಗಿ ಹಾಜರಿದ್ದ ಶ್ರೀ.ಹನುಮಂತಪ್ಪ ರವರು ತಿಳಿಸಿರುತ್ತಾರೆ ಹಾಗೂ ಶ್ರೀಮತಿ ಅನಿತಾ ಪ್ರಸಾದ್ ಅನ್ನಪೂರ್ಣೇಶ್ವರಿ ನಗರದ 2ನೇ ಅಡ್ಡರಸ್ತೆಗೆ ದೂರಿಗೆ ಸಂಬಂಧಪಟ್ಟಂತೆ ಕಾಲಾವಕಾಶ ನೀಡಬೇಕೆಂದು ಕೋರಿರುತ್ತಾರೆ.

ಘನತ್ಯಾಜ್ಯ ವಿಭಾಗಕ್ಕೆ ಸಂಬಂಧಪಟ್ಟಂತೆ ಎಲ್ಲಾ ಬಡಾವಣೆಗಳಲ್ಲಿ ಸಮರ್ಪಕವಾಗಿ ತ್ಯಾಜ್ಯವನ್ನು ಸಂಗ್ರಹಣೆ ಮಾಡುತ್ತಿರುವುದಾಗಿ ಸಭೆಯಲ್ಲಿ ವ್ಯಕ್ತಪಡಿಸಿರುತ್ತಾರೆ. ಮುಂದುವರೆದಂತೆ ಸದರಿ ಬಡಾವಣೆಯಲ್ಲಿನ ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕರನ್ನು ಮಾನ್ಯ ಆಯುಕ್ತರ ಆದೇಶದನ್ವಯ ಕೂಡಲೇ ಗುರುತಿಸಿ ಆದೇಶದಲ್ಲಿ ಸೂಚಿಸಿರುವಂತೆ ಕ್ರಮವಹಿಸಬೇಕೆಂದು ನೋಡಲ್ ಅಧಿಕಾರಿಯವರು ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸುತ್ತಾ ಮುಂದಿನ ಸಭೆಯಲ್ಲಿ ಸದರಿ ವಿಷಯದ ಬಗ್ಗೆ ಚರ್ಚಿಸಲು ತಿಳಿಸಲಾಗಿರುತ್ತದೆ ಮತ್ತು ಹಾಜರಿದ್ದ ನಿವಾಸಿಗಳು ನಾಗರಭಾವಿ ಮುಖ್ಯ ರಸ್ತೆಯ ದಕ್ಷಿಣ ಭಾಗದ 5ನೇ ಅಡ್ಡರಸ್ತೆಯಿಂದ ನಾಗರಭಾವಿ ವೃತ್ತದವರೆಗೆ ಈ ಹಿಂದಿನ ಸಭೆಯಲ್ಲಿ ತಿಳಿಸಿರುವಂತೆ ಪಾದಚಾರಿ ಒತ್ತುವರಿಯನ್ನು ತೆರವುಗೊಳಿಸಿರುವ ಸಂಬಂಧ ಧನ್ಯವಾದಗಳನ್ನು ತಿಳಿಸಿರುತ್ತಾರೆ.

ಕ್ರಮ: ಸ.ಕಾ.ನಿ.ಅ (ಘ.ತ್ಯಾ.ನಿ) ಹಾಗೂ ಶ್ರೀ.ರವಿಕುಮಾರ್ ಮತ್ತು ಶ್ರೀ.ವಿಜಯ್ ಕಿರಿಯಆರೋಗ್ಯ ಪರಿವೀಕ್ಷಕರು

ವಾರ್ಡ್-129ರ ಬೀದಿದೀಪಗಳ ನಿರ್ವಾಹಣೆಗೆ ಸಂಬಂಧಿಸಿದಂತೆ ಅನೇಕ ಕಂಬಗಳಲ್ಲಿ **DP Switch** ಗಳು ಇಲ್ಲದಿರುವುದರಿಂದ ಇದರಿಂದಾಗಿ ಅನಾಹುತವಾಗುವ ಸಂಬವವಿರುವುದರಿಂದ ಕೂಡಲೇ ಗುರುತಿಸಿ ಸರಿಪಡಿಸಲು ಕ್ರಮ ವಹಿಸಲು ಹಾಗೂ ಬೀದಿದೀಪಗಳನ್ನು ಬೆಳಗ್ಗೆ 6.00 ಘಂಟೆಗೆ ಸಮಯಕ್ಕೆ ಸರಿಯಾಗಿ ನಂದಿಸಲು ಕ್ರಮ ವಹಿಸಬೇಕೆಂದು ಸಭೆಯಲ್ಲಿ ತಿಳಿಸಲಾಗಿರುತ್ತದೆ ಮತ್ತು ಅನೇಕ ರಸ್ತೆಗಳಲ್ಲಿ ಹಾಳಾಗಿರುವ ಬೀದಿದೀಪಗಳನನು ಗುರುತಿಸಿ ಸರಿಪಡಿಸಲು ಹಾಜರಿದ್ದ ನಿವಾಸಿಗಳು ಕೋರಿರುತ್ತಾರೆ.

ಕ್ರಮ: ಸಹಾಯಕ ಅಭಿಯಂತರರು ಶ್ರೀ.ವಿ.ಭರತ್

ಮೇಲ್ಕಂಡ ಎಲ್ಲಾ ಅಂಶಗಳ ಬಗ್ಗೆ ಸೂಚಿಸಿರುವ ಸಂಬಂಧ ಪಟ್ಟ ಅಧಿಕಾರಿಗಳು ಅಗತ್ಯ ಕ್ರಮವಹಿಸಿ ಕೈಗೊಂಡ ಕ್ರಮದ ಬಗ್ಗೆ ಸಂಬಂಧಪಟ್ಟವರಿಗೆ ದೂರವಾಣಿ ಮುಖಾಂತರ/ ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರುತ್ತಾ ಅಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಹಾಜರಾಗಿರುವುದಿಲ್ಲ)
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲುಕೋರಿದೆ.
2. ಜಂಟಿಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
3. ಮುಖ್ಯಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
4. ಕಾರ್ಯಪಾಲಕಅಭಿಯಂತರರು ರಾ.ರಾ.ನಗರ ವಿಭಾಗರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.